## ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸಂಡೂರು
## ಸಿ.ಸಿ. ನಂ: 378/2021

| | | | |
|---|---|---|---|
| **ಸಾಕ್ಷಿದಾರರ ಹೆಸರು** | : | **ಎ.ಮಲ್ಲಮ್ಮ** | **ಪಿ.ಡಬ್ಲ್ಯೂ-5** |
| **ಗಂಡನ ಹೆಸರು** | : | **ಕೆ.ಬಸವರಾಜ.** | **ಸಿ.ಡಬ್ಲ್ಯೂ-9** |
| **ವಯಸ್ಸು** | : | **55 ವರ್ಷ** | |
| **ಉದ್ಯೋಗ** | : | **ಶಿಕ್ಷಕಿ.** | **ಸಾಕ್ಷಿಗೆ ಪ್ರಮಾಣ ವಚನ ಭೋದಿಸಿದ ದಿನಾಂಕಃ 18.08.2025.** |
| **ವಾಸಸ್ಥಳ** | : | **ಕೂಡ್ಲಿಗಿ.** | |

**ಸಾಕ್ಷಿಯ ಮುಖ್ಯ ವಿಚಾರಣೆಃ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

ಚಾಸಾ-1 ನನ್ನ ಮಗಳು. ದಿಃ 24.07.2021 ರಂದು ಮಃ 01.45 ಗಂಟೆಗೆ ಸುಮಾರಿಗೆ ನಾನು ಮತ್ತು ಚಾಸಾ-1 ರವರು ಸೇರಿ ನನ್ನ ಗಂಡನಾದ ಕೆ.ಬಸವರಾಜ ರವರು ನಮಗೆ ಕೂಡ್ಲಿಗಿ ಬಸ ನಿಲ್ದಾಣಕ್ಕೆ ಬಿಟ್ಟು ನನಗೆ ಬಸ ಹತ್ತಿಸಿರುತ್ತಾರೆ. ನಾವು ಆ ದಿನ ಕೂಡ್ಲಿಗಿಯಿಂದ ಸಂಡೂರುಗೆ ಬರುತ್ತಿದ್ದೇವು. ನನಗೆ ಮತ್ತು ಚಾಸಾ-1 ರವರಿಗ ಬಸ ಹತ್ತಿಸಿ ನನ್ನ ಗಂಡ ತನ್ನ ದ್ವಿಚಕ್ರ ವಾಹನದಲ್ಲಿ ಹೆಲಮೇಟ ಹಾಕಿಕೊಂಡು ನಿದನವಾಗಿ ಸಂಡೂರಿಗೆ ಬರುತ್ತಿದ್ದರು. ಬಂಡ್ರಿ ಗ್ರಾಮದ ಮಾರೆಮ್ಮ ದೇವಸ್ಥಾತನದ ಹತ್ತಿರ ನನ್ನ ಗಂಡ ಎಡಭಾಗದಲ್ಲಿ ಹೋಗುತ್ತಿರುವಾಗ ಮುಂದುಗಡೆಯಿಂದ ಸ್ವಲ್ಪ ತೀರುವ ಇರುವ ರಸ್ತೆಯಲ್ಲಿ ಒಂದು ಲಾರಿ ಅತಿವೇಗ ಮತ್ತು ನಿಷಕಾಜಲತನನಿಂದ ಬಂದು ಅವರ ವಾಹನಕ್ಕೆ ಡಿಕ್ಕಿ ಪಡಿಸಿರುತ್ತದೆ. ಸದರಿ ಡಿಕ್ಕಿ ಪಡಿಸಿದ ಶಬ್ದವನ್ನು ನಮಗೆ ಕೇಳಿರುತ್ತದೆ. ಆ ಸಮಯದಲ್ಲಿ ಬಸ್ಸನಲ್ಲಿ ಕುಳಿತ್ತಿದ್ದ ಜನರು ಶಬ್ದ ಕೇಳಿ ಸ್ಪಟ ಡೇಟ ಎಂದು ಹೇಳಿರುತ್ತಾರೆ. ಆದರೆ ಬಸ ಚಾಲಕರು ಬಸ ನಿಲ್ಲಿಸದ ಮುಂದು ಹೋಗಿರುತ್ತಾರೆ. ನಂತರ ಮಃ 02.45 ಗಂಟೆಗೆ ಚಾಸಾ-8 ರವರು ಚಾಸಾ-1 ರವರ ಫೊನ್ಗೆ ಕರೆ ಮಾಡಿ ನಿಮ್ಮ ತಂದೆಗೆ ಅಪಘಾತವಾಗಿದೆ ಎಂದು ತಿಳಿಸಿ ಸ್ಥಳಕ್ಕೆ ಬರಲು ಕೇಳಿಕೊಂಡಿರುತ್ತಾರೆ. ನಾವು ಮತ್ತು ವಾಪಸ್ಸು ಅಪಘಾತ ಸ್ಥಳಕ್ಕೆ ಹೋಗಿ ನೋಡಿದಾಗ

ನನ್ನ ಸ್ವಳದಲ್ಲಿಯ ಮೃತ ಪಟ್ಟಿದ್ದರು. ಸದರಿ ಲಾರಿಯ ಚಾಲಕ ಸ್ವಳದಲ್ಲಿ ಇದ್ದು ತನ್ನ ಅಜಾಗೃಕತೆಯಿಂದ ಅಪಘಾತವಾಗಿದೆ ಎಂದು ಒಪ್ಪಿಕೊಂಡಿದ್ದನು. ಚಾಸಾ-8 ರವರು ಕಾರಿನಲ್ಲಿ ಬರುತ್ತಿರುವಾ ಸದರಿ ಅಪಘಾತ ನೋಡಿರುವುದಾಗಿ ತಿಳಿಸಿದ್ದರು. ಅವರಿಗೆ ಕಾಲಿಗೆ, ಎದೆಗೆ, ಗಡ್ಡಕ್ಕೆ, ಎರಡು ಮೊಣಕಾಲಿಗೆ ಪಟ್ಟೆ ಆಗಿರುತ್ತದೆ. ನಂತರ ಚಾಸಾ-10 ರವರು ವಿಷಯ ತಿಳಿದುಕೊಂಡು ಸ್ದಳಕ್ಕೆ ಬಂದಿರುತ್ತಾರೆ. ಆ ದಿನ ದೂರು ಸಲ್ಲಿಸಲು ಆಗಿರುವುದಿಲ್ಲ, ನಂತರವಾಗಿ ದಿಃ 25.07.2021 ರಂದು ದೂರು ಸಲ್ಲಿಸಿರುತ್ತೇನೆ. ನನ್ನ ಗಂಡನ ಚಾಲನೆ ಮಾಡುತ್ತಿದ್ದ ವಾಹನ ಸಂಖ್ಯೆ ಕೆಎ-35-ಇಬಿ-8793 ಇರುತ್ತದೆ. ಲಾರಿ ಸಂಖ್ಯೆ ಕೆಎ-35-ಸಿ-6141 ಇರುತ್ತದೆ. ಆ ದಿನ ಅಪಘಾತಪಡಿಸಿ ಲಾರಿ ಚಾಲಕ ನ್ಯಾಯಾಲಯದ ಮುಂದೆ ಇರುವ ಆರೋಪಿ ಆಗಿರುತ್ತಾರೆ. ನಾನು ಈ ಬಗ್ಗೆ ಪೋಲಿಸರಿಗೆ ಹೇಳಿಕೆ ನೀಡಿರುತ್ತೇನೆ.

**<u>ಪಾಟೀ ಸವಾಲುಃ ಆರೋಪಿ ಪರ ಶ್ರೀ. ಪಿ.ಅರ.ಪಿ ವಕೀಲರಿಂದ</u>**

ನಾನು ಆ ದಿನ ಆಟೋದಲ್ಲಿ ಬಸ್ ನಿಲ್ದಾಣಕ್ಕೆ ಬಂದಿರುತ್ತೇನೆ ಎಂದು ಪೋಲಿಸರಿಗೆ ಹೇಳಿಕೆಯಲ್ಲಿ ಹೇಳಿರುವುದಿಲ್ಲ. ನನಗೆ ಕನ್ನಡ ಓದಲು ಮತ್ತು ಬರೆಯಲು ಬರುತ್ತದೆ ಎಂದರೆ ಸರಿ. ನಾವು ಕೂಡ್ಲಿಗಿ ಬಸ ನಿಲ್ದಾಣದಿಂದ ಸಂಡೂರ ಬಸಗೆ ಹತ್ತಿರುತ್ತೇವೆ. ಆದರೆ ಮೇಲೆ ಏನು ಏನು ಬರೆದಿತ್ತು ಎಂದು ನನಗೆ ಗೊತ್ತಿಲ್ಲ. ನನಗೆ ಸದರಿ ಬಸ ಸಂಖ್ಯೆ ಹೇಳಲಾಗುವುದಿಲ್ಲ. ನಾವು ಆ ದಿನ ಬಸ್ಸಿನ ಸಂಚಾರ ಟೀಕೆಟ ತೆಗೆಸಿರುತ್ತೇವೆ. ಸದರಿ ಟೀಕೆಟ ನಾನು ಪೋಲಿಸರಿಗೆ ನೀಡಿರುವುದಿಲ್ಲ. ನಮ್ಮ ಬಸ್ಸಿಗೂ ಮತ್ತು ನನ್ನ ಗಂಡ ಹೋಗುತ್ತಿದ್ದ ವಾಹನಕ್ಕೆ ಎಷ್ಟು ಅಂತರ ಇತ್ತು ಎಂದು ಹೇಳಲಾಗುವುದಿಲ್ಲ. ನಾನು ಬಸ್ಸಿನಲ್ಲಿ ಮದ್ಯಾದ ಸೀಟ್‌ನಲ್ಲಿ ಕುಳಿತುಕೊಂಡಿದ್ದೆ. ಸದರಿ ಬಸ್ಸಿನಲ್ಲಿ ತುಂಬಾ ಜನ ಇದ್ದರು. ಹಾಗಾಗಿ ಬಸ್ಸಿನಲ್ಲಿ ತುಬಾ ಗಳಾಟೆ ಇತ್ತು ಎಂದರೆ ಸರಿ.

ಬಂಡ್ರಿ ಬಸ ನಿಲ್ದಾಣದಿಂದ ಅಪಘಾತ ಸ್ದಳಕ್ಕೆ ಎಷ್ಟು ಅಂತರ ಇತ್ತು ಎಂದು

ಹೇಳಲಾಗುವುದಿಲ್ಲ ಕೆರೆಯ ನಂತರ ಬಂಡ್ರಿ ಬಸ ನಿಲ್ದಾಣ ಇರುತ್ತದೆ, ಅಲ್ಲಿ ಜನರು ಇಳಿಯುವಾಗ ಸಾಕಷ್ಟು ಗಳಾಟೆ ಇರುತ್ತದೆ ಎಂದರೆ ಸರಿ. ಹಾಗಾಗಿ ಅಪಘಾತವಾದ ಶಬ್ದ ನಮಗೆ ಕೇಳಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನಿಗೆ ಅಪಘಾತವಾಗಿದೆ ಎಂದು ಗೊತ್ತಿಲ್ಲದ ಕಾರಣ ನಾವು ಬಂಡ್ರಿ ಬಸ ನಿಲ್ದಾಣದಲ್ಲಿ ಇಳಿದಿರುವುದಿಲ್ಲ. ರಸ್ತೆ ತೀರುವುನಲ್ಲಿ ಯಾವುದೆ ವಾಹನ ಜೊರಾಗಿ ಚಾಲನೆ ಮಾಡುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನ ಹತ್ತಿರ ಫೊನ್ ಇರಲಿಲ್ಲ ಎಂದರೆ ಸರಿಯಲ್ಲ. ಅವರ ಫೊನ್ ಸಂಖ್ಯೆ ನಾನು ನನ್ನ ಹೇಳಿಕೆಯಲ್ಲಿ ಹೇಳಿರುವುದಿಲ್ಲ. ಚಾಸಾ-8 ರವರ ಫೊನ ಸಂಖ್ಯೆ ನನ್ನ ಹೇಳಿಕೆಯಲ್ಲಿ ಬರೆಸಿರುವುದಿಲ್ಲ.

ನಾವು ಅಪಘಾತ ಸ್ಥಳಕೆ ಮತ್ತೆ ಸರಕಾರಿ ಬಸನಲ್ಲಿ ಹೋಗಿರುತ್ತೇವೆ. ಚಾಸಾ-1 ರವರು ಎಲ್ಲಿವರೆಗೆ ಟೀಕಟೆ ಪಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನಾನು ಯಾವುದೇ ಟೀಕೇಟ ಪಡೆದಿರುವುದಿಲ್ಲ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ-8 ರವರು ನನಗೆ ಪರಿಚಯ ಇರಲಿಲ್ಲ. ನನ್ನ ಗಂಡನಿಗೆ ಪರಿಚಯ ಇದ್ದರು. ಚಾಸಾ-8 ರವರು ನನ್ನ ಮಗಳಿಗೆ ಫೊನ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಘಟನ ವಿಷಯ ಕೇಳಿ ನಾವು ನೇರವಾಗಿ ಅಪಘಾತ ಸ್ಥಳಕ್ಕೆ ಹೋಗಿರುತ್ತೇವೆ. ಅಪಘಾತ ಸ್ಥಳದಲ್ಲಿ ಆರೋಪಿ ಹಾಜರ ಇರಲಿಲ್ಲ ನಾನು ಅವರನ್ನು ವಿಚಾರಣೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಘಟನ ಸ್ಥಳಕೆ ಮತ್ತು ಆರೋಪಿಗೆ ಯಾವುದೇ ಸಂಬಂಧ ಇರವುದಿಲ್ಲ ಎಂದರೆ ಸರಿಯಲ್ಲ. ಆಲ್ಲಿ ತೀರುವ ಇರುವುದರಿಂದ ಆರೋಪಿ ಲಾರಿಯನ್ನು ಅತಿವೇಗದಿಂದ ಚಾಲನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ಲಾರಿಯ ಬಿಳಿ ಬಣ್ಣದ ಇತ್ತು ಎಂದು ನನ್ನ ಹೇಳಿಕೆಯಲ್ಲಿ ಬರೆಸಿರುವುದಿಲ್ಲ. ಅಶೋಕ ಲೆಲ್ಯಾಂಡ ಅಂತಾ ಬರೆಸಿರುತ್ತೇನೆ. ಆರೋಪಿಯ ತಪ್ಪಿನಿಂದ ಯಾವುದೇ ಅಪಘಾತವಾಗಿಲ್ಲ ಎಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇಲ್ಲ.</u>**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ.ಹೇ.ಕೆ.ಸರಿ.ಇದೆ.**

**ಪ್ರ.ದ.ನ್ಯಾ.ದಂಡಾಧಿಕಾರಿಗಳು,**
**ಸಂಡೂರು.**